ಟಿ. ತಿಮ್ಮಪ್ಪ

# ಆನ್‌ಲೈನ್ ಮಣ್ಣು ಪ್ರಕೃತಿಯ ಹಣ್ಣು

ಸೂರ್ಯ ನೆತ್ತಿಯ ಮೇಲೆ ಬಂದಿದ್ದ. ಬಿರುಬಿಸಿಲು ರಾಚುತಿತ್ತು. ತಿಟ್ಟಿನ ಮೇಲಿನ ಹೊಲದಲ್ಲಿ ಕಳೆ ಕೀಳುತಿದ್ದ ಚನ್ನಪ್ಪ ಬಿಸಲಿನ ಜಳದಿಂದ ಆಯಾಸಗೊಂಡು ತುಸು ಹೊತ್ತು ವಿಶ್ರಮಿಸಿಕೊಳ್ಳೋಣವೆಂದು ಹೊಲದ ಮೂಲೆಯಲ್ಲಿದ್ದ ಹಲಸಿನ ಮರದ ಕಡೆಗೆ ನಡೆದ. ಮರವನ್ನು ಸಮೀಪಿಸುತಿದ್ದಂತೆ ಮರದಲ್ಲಿ ಹಣ್ಣಾಗಿ ಜೋತುಬಿದ್ದಿದ್ದ ಹಲಸಿನ ಹಣ್ಣುಗಳ ಗಮಲು ಮೂಗಿಗೆ ಬಡಿದು ತಲೆಯೆತ್ತಿ ಮರದ ಮೇಲೆ ನೋಡಿದ. ಹತ್ತಿರದ ಕೊಂಬೆಯೊಂದರಲ್ಲಿ ಒಂದರ ಪಕ್ಕ ಒಂದು ಜೋತುಬಿದ್ದು ಹಳದಿ ಬಣ್ಣಕ್ಕೆ ತಿರುಗಿದ ಎರಡು ಹಲಸಿನ ಹಣ್ಣುಗಳು ದೃಷ್ಟಿಗೆ ಬಿದ್ದವು. ಆ ಹಲಸಿನ ಮರದ ಹಣ್ಣುಗಳನ್ನು ಚನ್ನಪ್ಪ ಎಂದೂ ದುಡ್ಡಿಗಾಗಿ ಮಾರಿದವನಲ್ಲ. ಯಾರು ಯಾರೋ ಮರ ಹತ್ತಿ ಹಣ್ಣುಗಳನ್ನು ಕಿತ್ತುಕೊಂಡು ಹೋದರೂ ಎಂದೂ ಕೇಳಿದವನಲ್ಲ. ನಾನೇ ನೆಟ್ಟ ಮರ ಫಲ ನೀಡುತ್ತಿದೆ... ಅದರ ಹಣ್ಣು ಯಾರಾದರೂ ತಿಂದು ತೃಪ್ತಿಪಡಲಿ, ದೇವರು ನನಗೆ ಏನೂ ಕಡಿಮೆ ಮಾಡಿಲ್ಲವೆಂಬುದು ಅವನ ಮನದಾಳದ ಭಾವನೆಯಾಗಿತ್ತು. ಅವನ ಮನೆಯಲ್ಲಿದ್ದುದು ಅವನ ಹೆಂಡತಿ ಪುಟ್ಟಕ್ಕ ಮತ್ತು ಅವನು ಮಾತ್ರ. ಇರುವ ಒಬ್ಬ ಮಗ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರಾಗಿದ್ದ. ತಾನು ಮತ್ತು ತನ್ನ ಹೆಂಡತಿ ಪುಟ್ಟಕ್ಕ ಈ ಭೂಮಿಯಿಂದ ನಿರ್ಗಮಿಸಿದ ನಂತರ ತಮ್ಮ ಮನೆ, ಹೊಲಗದ್ದೆಗಳು ಮಾರಾಟವಾಗಿ ಪರರ ಪಾಲಾಗುವುದು ನಿಶ್ಚಿತವೆಂದು ಚನ್ನಪ್ಪನಿಗೆ ಅರಿವಾಗಿತ್ತು. ಅದಲ್ಲದೆ ಅದು ಊರಿನ ಎಲ್ಲರಿಗೂ ತಿಳಿದ ವಿಷಯ. ಹಾಗಾಗಿ ಮರದಲ್ಲಿ ಹಣ್ಣು ಬಿಟ್ಟ ಸಮಯದಲ್ಲಿ ಊರಿನ ಕೆಲವರು ಅವನ ಉಪಸ್ಥಿತಿಯಲ್ಲಿ ಅವನಿಗೆ ತಿಳಿಸಿ ಮತ್ತು ಅನುಪಸ್ಥಿತಿಯಲ್ಲಿ ತಿಳಿಸದೆಯೂ ಮರ ಹತ್ತಿ ಹಲಸಿನ ಹಣ್ಣುಗಳನ್ನು ಕಿತ್ತುಕೊಂಡು ಹೋಗುತ್ತಿದ್ದರು.